ಜೋಯಿಸ್ ಪ್ರಮುಖ ಪಾತ್ರಗಳಲ್ಲಿದ್ದ 'ಕೆಜಿಎಫ್– ಚಾಪ್ಟರ್ 2' ಕನ್ನಡದ ಮಟ್ಟಿಗೆ ಸಾರ್ವಕಾಲಿಕ ದುಬಾರಿ ಬಜೆಟ್‌ನ ಸಿನಿಮಾ ಎಂದು ಚಿತ್ರತಂಡ ಹೇಳಿಕೊಂಡಿದೆ. ಮೊದಲ ಭಾಗದ ಯಶಸ್ಸು, ಯಶ್ ಪ್ರಭಾವಳಿ, 'ಹೊಂಬಾಳೆ ಫಿಲ್ಮ್ಸ್' ನಿರ್ಮಾಣ ಸಂಸ್ಥೆಯ ಪ್ರಚಾರತಂತ್ರ – ಎಲ್ಲವೂ ಸೇರಿಕೊಂಡು ಸಿನಿಮಾ 'ನ ಭೂತೋ' ಎನ್ನುವಂಥ ದೊಡ್ಡ ಯಶಸ್ಸು ಗಳಿಸಿತು.

ಕನ್ನಡದೊಂದಿಗೆ ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಿ ಭಾಷೆಗಳಲ್ಲಿಯೂ 'ಕೆಜಿಎಫ್– ಚಾಪ್ಟರ್ 2' ತೆರೆಕಂಡಿತು. ಎಲ್ಲ ಭಾಷೆಗಳಲ್ಲೂ ಗಲ್ಲಾಪೆಟ್ಟಿಗೆಯ ಕೊಳ್ಳೆ. ಈ ಅಬ್ಬರದ ಎದುರು, ರಾಜಮೌಳಿ ನಿರ್ದೇಶನದ ತೆಲುಗಿನ 'ಆರ್‌ಆರ್‌ಆರ್' ಚಿತ್ರ ಕೂಡ ಮಂಕೆನಿಸಿತು. 'ಕೆಜಿಎಫ್– ಚಾಪ್ಟರ್2' ಗಳಿಕೆ 1,200ರಿಂದ 1,250 ಕೋಟಿ ರೂಪಾಯಿ ಎಂದು ಹೇಳಲಾಗುತ್ತಿದೆ. ಕನ್ನಡದ ವಿಷಯ ಬಿಡಿ, ಭಾರತೀಯ ಚಿತ್ರರಂಗದಲ್ಲೇ ಅತಿ ಹೆಚ್ಚು ಗಳಿಕೆಯ ಚಿತ್ರಗಳ ಸಾಲಿಗೆ 'ಕೆಜಿಎಫ್– ಚಾಪ್ಟರ್ 2' ಸೇರ್ಪಡೆಗೊಂಡಿದೆ.

'ಕೆಜಿಎಫ್– ಚಾಪ್ಟರ್2' ತೆರೆಕಂಡ ಏಪ್ರಿಲ್‌ನಲ್ಲೇ ಬಿಡುಗಡೆಯಾದ 'ತಲೆದಂಡ' ಚಿತ್ರವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಸಂಚಾರಿ

## ಗೆಲುವಿನ ಮೂಲ 'ಮಾರ್ಕೆಟಿಂಗ್'ನಲ್ಲಿ!

**2022ರಲ್ಲಿ ಬಹು ದೊಡ್ಡ ಗೆಲುವು ಸಾಧಿಸಿದ 'ಕೆಜಿಎಫ್ ಚಾಪ್ಟರ್ 2' ಹಾಗೂ 'ಕಾಂತಾರ' ಸಿನಿಮಾಗಳ ಯಶಸ್ಸಿಗೆ ಹಿರಿಯ ಪತ್ರಕರ್ತ ಮುರಳೀಧರ ಖಜಾನೆ ಗುರ್ತಿಸುವ ಕಾರಣ – ಮಾರ್ಕೆಟಿಂಗ್!**



'2022ರಲ್ಲಿ ಬಹು ದೊಡ್ಡ ಯಶಸ್ಸು ಗಳಿಸಿದ ಎರಡೂ ಚಿತ್ರಗಳನ್ನು ನಿರ್ಮಿಸಿರುವ ಹೊಂಬಾಳೆ ಫಿಲ್ಮ್ಸ್ ಸಂಸ್ಥೆ ಸಿನಿಮಾಗಳನ್ನು ಮಾರ್ಕೆಟ್ ಮಾಡುವ ಕಲೆಯನ್ನು ಚೆನ್ನಾಗಿ ಅರಿತುಕೊಂಡಿದೆ; ಸಿನಿಮಾ ಮಾರ್ಕೆಟಿಂಗ್‌ಗೆ ಹೊಸ ಅರ್ಥವನ್ನು ನೀಡಿದೆ. ಮಾರುಕಟ್ಟೆ ತಂತ್ರದಿಂದಲೇ ಹೊಂಬಾಳೆಗೆ ತನ್ನ ನಿರ್ಮಾಣದ ಸಿನಿಮಾಗಳನ್ನು ಬೇರೆ ಬೇರೆ ರಾಜ್ಯಗಳಿಗೆ ತಲುಪಿಸುವುದು ಸಾಧ್ಯವಾಯಿತು' ಎನ್ನುವುದು ಖಜಾನೆ ಅವರ ವಿಶ್ಲೇಷಣೆ.

ಹೊಂಬಾಳೆ ಸಂಸ್ಥೆಯ ನಿರ್ಮಾಣ ಆಗಿರದಿದ್ದರೆ, 'ಕಾಂತಾರ' ಕನ್ನಡಕ್ಕಷ್ಟೇ ಸೀಮಿತವಾಗುತ್ತಿತ್ತು ಎಂದು ಅಭಿಪ್ರಾಯಪಡುವ ಅವರು, ತಮ್ಮ ಮಾತಿಗೆ ಉದಾಹರಣೆಯಾಗಿ 'ವಿಕ್ರಾಂತ್ ರೋಣ' ಚಿತ್ರವನ್ನು ನೆನಪಿಸಿಕೊಳ್ಳುತ್ತಾರೆ. ಪ್ರಚಾರತಂತ್ರದಲ್ಲಿ 'ವಿಕ್ರಾಂತ್ ರೋಣ' ತಂಡ ಸಾಕಷ್ಟು ಶ್ರಮ ಹಾಕಿದ್ದರೂ, ಅದರ ಪ್ರಿ ರಿಲೀಸ್ ಮಾರ್ಕೆಟಿಂಗ್ 'ಹೊಂಬಾಳೆ' ಸಂಸ್ಥೆಯಷ್ಟು ವ್ಯವಸ್ಥಿತ ಮಟ್ಟದಲ್ಲಿ ಇರಲಿಲ್ಲ. ಆ ಕಾರಣದಿಂದಲೇ 'ವಿಕ್ರಾಂತ್ ರೋಣ' ನಿರೀಕ್ಷಿಸಿದಷ್ಟು ಯಶಸ್ಸು ಪಡೆಯುವುದು ಸಾಧ್ಯವಾಗಲಿಲ್ಲ ಎನ್ನುತ್ತಾರೆ.

ಸಾಕಷ್ಟು ಪ್ರಚಾರವಿಲ್ಲದಿದ್ದರೂ ಗೆಲುವು ಸಾಧಿಸಿದ '777 ಚಾರ್ಲಿ' ಸಿನಿಮಾದ ಯಶಸ್ಸಿಗೆ ಖಜಾನೆ ಅವರು ಬೇರೆಯದೇ ಕಾರಣ ನೀಡುತ್ತಾರೆ. 'ಪ್ರಾಣಿಗಳನ್ನು ಬಳಸಿಕೊಂಡು ಮನೋಜ್ಞ ಸಿನಿಮಾಗಳನ್ನು ಮಾಡಿರುವ



'ತೋತಾಪುರಿ' ಚಿತ್ರದಲ್ಲಿ ಜಗ್ಗೇಶ್ ಲುಕ್



'ಲವ್ 360' ಚಿತ್ರದಲ್ಲಿ ಪ್ರವೀಣ್, ರಚನಾ ಚಂದರ್